ಉಭಯಕುಶಲೋಪರಿ ಮಾತುಕತೆಗಳಾದ ಮೇಲೆ, ಅಪ್ಪ ಹೇಳಿದ ಒಂದು ಸಂಗತಿ ನನಗಾಗ ಅರ್ಥವಾಗಿರಲಿಲ್ಲ: ಅಮ್ಮ ನನ್ನ ಮತ್ತು ತಂಗಿಯ ಮೇಲೆ, ಭಾರತದಿಂದ ಬ್ಲ್ಯಾಕ್ ಮ್ಯಾಜಿಕ್ ಮಾಡಿಸುತ್ತಿದ್ದಾಳೆ! (ಈಗ ಅದರ ಬಗ್ಗೆ ಅರಿವಾಗಿ ನನ್ನನ್ನು ಸಂಪೂರ್ಣ ಅಧೀರನನ್ನಾಗಿ ಮಾಡಿದೆ: ನನ್ನನ್ನು ಹಾಗೂ ರೇಷ್ಮಳನ್ನು ತನ್ನ ಸಂಪೂರ್ಣ ಹಿಡಿತದಲ್ಲಿಟ್ಟುಕೊಳ್ಳಲು, ಅಮ್ಮ ಅದನ್ನು ಮಾಡುತ್ತಿದ್ದಳು.) ಅಪ್ಪ ಹೇಳುತ್ತಿದ್ದ: ನೇಹಾ ಹಣದ ಪಿಶಾಚಿಯಾಗಿದ್ದಾಳೆ. ಅದು ನನಗೂ ಸರಿ ಎಂದೆನಿಸುತ್ತಿತ್ತು. ಅಮ್ಮನ ದಂಧರಾಳತನ, ಹಣದ ಬಗ್ಗೆ ಅತಿಯಾದ ವ್ಯಾಮೋಹ, ಐಶಾರಾಮದ ವಸ್ತುಗಳನ್ನು ಕೊಳ್ಳುವುದು ಎಲ್ಲವೂ ಅಪ್ಪನ ತರ್ಕಕ್ಕೆ ಪುಷ್ಟಿ ನೀಡುವಂತಿದ್ದವು.

ಅಷ್ಟು ಹೊತ್ತಿಗೆ ಮೊದಲನೆಯ ವ್ಯಕ್ತಿ ಮನೆಗೆ ಬರುವುದು ನಿಂತುಹೋಗಿತ್ತು. ಅಮ್ಮ ಅವನಲ್ಲಿಯೂ ಆಸಕ್ತಿ ಕಳೆದುಕೊಂಡಿರಬೇಕು. ಆಮೇಲೆ ಅಮ್ಮ ಇನ್ನೊಬ್ಬನನ್ನು ತನ್ನ ಬಲೆಗೆ ಹಾಕಿಕೊಂಡಳು. ಯಾರಿಗೂ ಹೇಳದೆ ಕೇಳದೆ ಆತನನ್ನು ಮದುವೆಯಾದಳು; ಈ ವಿಷಯ ತನಗೆ ಹೇಗೋ ಗೊತ್ತಾಯಿತು. ಆದರೆ ಅವರಿಬ್ಬರೂ ಗಂಡ ಹೆಂಡತಿಯರ ತರಹ ಇರಲಿಲ್ಲ. ಅವನು ತನ್ನ ಮನೆಯಲ್ಲಿರುತ್ತಿದ, ಅಮ್ಮ ಅವಳ ಮನೆಯಲ್ಲಿ! ಅಮ್ಮ ಅವನಿಂದಲೂ ಸಾಕಷ್ಟು ಹಣ ಪೀಕಿಸಿರಬೇಕು. ಆದರೆ ಯಾವಾಗ ಅವನು ಕೆಲಸ ಕಳೆದುಕೊಂಡು, ಅಮ್ಮನಿಗೆ ಹಣದ ಸರಬರಾಜು ಮಾಡುವುದನ್ನು ನಿಲ್ಲಿಸಿದನೋ, ಆಗ ಅಮ್ಮ ಅವನನ್ನೂ ಬಿಟ್ಟುಬಿಟ್ಟಳು! ಅಮ್ಮನ ಕಾಮಪಿಪಾಸೆ ಮತ್ತು ಧನಲಾಲಸೆ ಅವಳನ್ನು ಇನ್ನೊಂದು ಮದುವೆಗೆ ದಬ್ಬಿದವು. ಆದರೆ, ಇಲ್ಲಿಯೂ ಅವಳ ಆಯ್ಕೆ ಸರಿಹೋದಂತೆ ಕಾಣಲಿಲ್ಲ. ತನಗೆ ಆ ಮದುವೆಯ ಬಗ್ಗೆ ಹೆಚ್ಚಿನ ವಿವರಗಳು ತಿಳಿಯದಿದ್ದರೂ, ಅದೂ ಕೂಡ ವೈಫಲ್ಯವೇ ಎಂಬ ಅಂಶ ನಿಚ್ಚಳವಾಗಿತ್ತು. ಕೊನೆಗೆ ಅಮ್ಮ ಅವನಿಂದಲೂ ವಿಚ್ಛೇದನ ಪಡೆದುಕೊಂಡಳು!

ಇತ್ತ ಕಡೆ ಅಪ್ಪ, ತನ್ನ ಅಮ್ಮನನ್ನು ಆಕೆಯ ವೃದ್ಧಾಪ್ಯದಲ್ಲಿ ಪಾಲನೆ ಮಾಡುತ್ತಿದ್ದ. ಅವನಿಗೆ ಆಗ ಜೀವನದಲ್ಲಿ ಒಂಟಿತನ ಬಾಧಿಸುತ್ತಿರಬೇಕು. ಅಲ್ಲದೆ, ಅವನಿಗೂ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕವಾಗಿ ಸಂಗಾತಿಯ ಅವಶ್ಯಕತೆ ತಲೆದೋರಿತ್ತೆಂದು ಕಾಣುತ್ತದೆ. ಹೀಗಾಗಿ ಅಪ್ಪನೂ ಒಮ್ಮೆ ತನ್ನ ಜೊತೆ ಮಾತಾಡುತ್ತಿದ್ದಾಗ, ಅವನು ಇನ್ನೊಂದು ಬಾರಿ ಮದುವೆಯಾದರೆ, ಅದಕ್ಕೆ ರಾಹುಲನ ಆಕ್ಷೇಪಣೆ ಇಲ್ಲವಷ್ಟೆ ಎಂದು ಕೇಳಿದ್ದ. ಅಮ್ಮ ಹಲವಾರು ಬಾರಿ ಮದುವೆ ಮಾಡಿಕೊಂಡ ಹಿನ್ನೆಲೆಯಲ್ಲಿ, ಅಪ್ಪ ಮಾಡುತ್ತಿರುವುದು ತಪ್ಪೆಂದು ನನಗೆ ಎನಿಸಲಿಲ್ಲ. ಅದೂ ಅಲ್ಲದೆ, ಆತ ಮದುವೆಯಾಗುವ ಮೊದಲು ನನ್ನ ಒಪ್ಪಿಗೆಯನ್ನು ಕೇಳುತ್ತಿದ್ದಾನೆ! ಹೀಗಾಗಿ ನಾನು ಅಪ್ಪನಿಗೆ ಕೂಡಲೇ ಒಪ್ಪಿಗೆಯನ್ನು ಸೂಚಿಸಿದೆ. ಅಂತೂ ಅಪ್ಪನೂ ಮರುಮದುವೆ ಮಾಡಿಕೊಂಡರು.

ಹೀಗೆಯೇ ವರ್ಷಗಳು ಉರುಳಿದವು. ನಾನು ಆಗ ಹೈಸ್ಕೂಲಿನ ಕೊನೆಯ ವರ್ಷದಲ್ಲಿದ್ದೆ. ಅಮ್ಮ ತನ್ನ 4ನೆಯ ಮದುವೆಗೆ ಹೊಂಚು ಹಾಕುತ್ತಿದ್ದಳು. ಅಮ್ಮ ತನ್ನ ಸಮಯವನ್ನೆಲ್ಲಾ ಕೆಲಸದಲ್ಲಿ ಹಾಗೂ ಪುರುಷ ಮಿಕಗಳ ಬೇಟೆಯಲ್ಲಿ ಕಳೆಯುತ್ತಿದ್ದಳು. ಹೀಗಾಗಿ ಮನೆಯ ಕೆಲಸವೆಲ್ಲಾ ನನ್ನ ಮೇಲೆ ಬೀಳುತ್ತಿತ್ತು. ಮನೆಯ ಸರ್ವಸ್ವವನ್ನು ನಿಭಾಯಿಸುವುದು (ಅಲಿಖಿತವಾಗಿ) ನನ್ನ ಜವಾಬ್ದಾರಿಯಾಗಿತ್ತು: ತಂಗಿಯನ್ನು ನೋಡಿಕೊಳ್ಳುವುದು, ಅವಳಿಗೆ ಕಾಲಕಾಲಕ್ಕೆ ಹೊಟ್ಟೆಗೆ ಹಾಕಿ ನಾನೂ ತಿನ್ನುವುದು, ಮನೆಯನ್ನು ಸ್ವಚ್ಛಗೊಳಿಸುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು ಇತ್ಯಾದಿ, ಇತ್ಯಾದಿ. ಇದರ ಜೊತೆಗೆ ನನ್ನ ವಿದ್ಯಾಭ್ಯಾಸ, ಸ್ಯಾಟ್ ಪರೀಕ್ಷೆ ತಯಾರಿ ಮತ್ತು ಅದನ್ನು ತೆಗೆದುಕೊಳ್ಳುವುದು, ಪಠ್ಯೇತರ ಚಟುವಟಿಕೆಗಳು ಇವುಗಳಂತೂ ನನ್ನನ್ನು ಸುಸ್ತು ಮಾಡಿ ಹಾಕುತ್ತಿದ್ದವು. ನಾನೆಂದೂ ಅವಿರತ ಕಾರ್ಯಗಳ ಬಗ್ಗೆ ಹಿಂಜರಿದವನಲ್ಲ. ಆದರೆ ಮನೆಯ ಸಂಪೂರ್ಣ ಕೆಲಸಗಳನ್ನು ನಿರ್ವಹಿಸಿಯೂ, ಅವಳಿಂದ ಬೈಸಿಕೊಳ್ಳಬೇಕಾದ ಗ್ರಹಚಾರಕ್ಕೆ ನಾನು ವಿಷಣ್ಣನಾಗುತ್ತಿದ್ದೆ. ಯಾರನ್ನಾದರೂ ಬೈಯದಿದ್ದರೆ, ಅಮ್ಮನಿಗೆ ಉಂಡ ಅನ್ನ ಅರಗುತ್ತಿರಲಿಲ್ಲವೇನೋ! ಅಪ್ಪ ಹೇಗೋ ಅವಳ ಕಬಂಧ ಬಾಹುವಿನಿಂದ ಬಚಾವಾದ, ಆದರೆ ನಾನು ಸಿಕ್ಕಿಬಿದ್ದಿದ್ದೆ. ಇಷ್ಟೆಲ್ಲಾ ಅವಾಂತರಗಳು ನಡೆಯುತ್ತಿದ್ದರೂ, ನಾನು ಮಾತ್ರ ಅಮ್ಮನನ್ನು ಸದಾಕಾಲ ಬೆಂಬಲಿಸುತ್ತಿದ್ದೆ. ಯಾರಾದರೂ ಅಮ್ಮನ ವಿರುದ್ಧ ಚಕಾರವೆತ್ತಿದರೆ, ನಾನು ಅಮ್ಮನನ್ನು ಸಮರ್ಥಿಸಿಕೊಳ್ಳುತ್ತಿದ್ದೆ. ಅಮ್ಮನೆಂಬ ಮಮಕಾರವೇ ನಮ್ಮನ್ನು ಕುರುಡು ಮಾಡಿಬಿಡುವುದೇನೋ! ಅಂತಹ ಸಮರ್ಥಿಸಿಕೊಳ್ಳುತ್ತಿರುವ ಸಂದರ್ಭದಲ್ಲೂ ಅಮ್ಮ ಅಲ್ಲಿ ಏನಾದರೂ ಇದ್ದರೆ  ನಿನಗೇಕೆ ಇಲ್ಲದ ವಿಷಯಗಳ ಬಗ್ಗೆ ಉಸಾಬರಿ ಎಂದು ನನ್ನನ್ನು ತೆಗಳುತ್ತಿದ್ದಳು! ನಾನಾಗ ಪೂರ್ತಿ ಕುಗ್ಗಿಹೋಗುತ್ತಿದ್ದೆ!

ಅಮ್ಮನ್ನನ್ನು ಇಷ್ಟಪಡುವಂಥವರು ಇಡಿಯ ಪ್ರಪಂಚದಲ್ಲಿ ಯಾರೂ ಇಲ್ಲವೇನೋ ಎಂಬ ಅನುಮಾನ ಆಗ ಬರಹತ್ತಿತು. ಅವಳ ಕಚೇರಿಯಲ್ಲಿ ಅವಳನ್ನು ಇಷ್ಟಪಡುವವರು ಯಾರೂ ಇರಲಿಲ್ಲ ಏಕೆಂದರೆ, ಅವಳು ಜನಗಳನ್ನು ಚೆನ್ನಾಗಿ ಬಳಸಿಕೊಂಡು, ನಂತರ ಅವರನ್ನು ಕೆಲಸದಿಂದ ನಿರ್ದಾಕ್ಷಿಣ್ಯವಾಗಿ ಕಿತ್ತು ಹಾಕುತ್ತಿದ್ದಳು. ಹೀಗಾಗಿ ಯಾರೂ ಅವಳನ್ನು ಇಷ್ಟಪಡುತ್ತಿರಲಿಲ್ಲ. ಜನರು ಅವಳ ಜೀವನದಲ್ಲಿ ಬಂದು ಹೋಗುತ್ತಿದ್ದರು. ಅವಳನ್ನು ಬಯಸುವ ಗೆಳತಿಯರು ಇಲ್ಲ, ಗಂಡ ಅಥವಾ ಗಂಡಂದಿರು ಇಲ್ಲ, ಕೊನೆಗೇ ಮಕ್ಕಳೇ ಇಲ್ಲ. ಅವಳ ಜೀವನದಲ್ಲಿ ಪ್ರತಿಯೊಬ್ಬರೂ ತಾತ್ಕಾಲಿಕ ಮಾತ್ರ!

ಹೀಗಿರುವಾಗ ಒಂದು ದಿನ ಅಮ್ಮ ರಾತ್ರಿಯನ್ನೆಲ್ಲಾ ಹೊರಗೆಲ್ಲೋ ಕಳೆದು, ಮನೆಗೆ ಬರುವಾಗ ಒಂದೇ ಒಂದು ಪಿಜ್ಜಾ ಚೂರನ್ನು ಹಿಡಿದುಕೊಂಡು ಬಂದಿದ್ದಳು! (ಈಗ ನೆನಪಿಸಿಕೊಂಡರೆ ತಿಳಿಯುತ್ತಿದೆ, ಅವಳೆಂದೂ ನನಗೆ ಸರಿಯಾಗಿ ಹೊಟ್ಟೆಗೇ ಹಾಕುತ್ತಿರಲಿಲ್ಲ!) ಅದು ನನಗೆ ಮತ್ತು ನನ್ನ ತಂಗಿಗೆ! ಆಗ ನನಗೆ ಹಸಿದು ಪ್ರಾಣ ಹೋಗುತ್ತಿತ್ತು. ಆ ಸಣ್ಣ ಚೂರನ್ನು ಹೇಗೆ ಹಂಚಿಕೊಳ್ಳುವುದು? ಬೇಸತ್ತು ನಾನು ಅದನ್ನು ರೇಷ್ಮಳಿಗೆ ಕೊಟ್ಟುಬಿಟ್ಟೆ. ಅವಳೂ ಸಹ ಆಗ ಹಸಿವಿನಿಂದ ಕಂಗಾಲಾಗಿದ್ದಳು. ಅಲ್ಲಿಯವರೆವಿಗೆ ನಾನು ಅಮ್ಮನ ಸಕಲ ಕ್ರೌರ್ಯವನ್ನೂ, ಬೈಗುಳಗಳನ್ನೂ, ಅರೆಹೊಟ್ಟೆ ಹಾಕಿದ್ದನ್ನೂ ಸಹಿಸಿಕೊಂಡಿದ್ದೆ. ಆದರೆ ಅಂದು ಹಸಿವಿನಿಂದ ಬಳಲುತ್ತಿದ್ದಾಗ, ಅಮ್ಮ ಒಂದು ಸಣ್ಣ ಚೂರನ್ನು ಇಬ್ಬರಿಗೂ ಸೇರಿಸಿ ಕೊಟ್ಟಿದ್ದು ನನ್ನ ಕ್ರೋಧ ಉಕ್ಕೇರಿತು, ಸಹನೆಯ ಕಟ್ಟೆ ಒಡೆಯಿತು. ಆ ಮನೆಯಲ್ಲಿ ಬಂದಿಯಂತೆ ಇದ್ದು, ಗುಲಾಮನಂತೆ ಕೆಲಸ ಮಾಡಿಕೊಂಡಿದ್ದುದು, ಅಮ್ಮನ ಅವಿಶ್ರಾಂತ ಬೈಗುಳಗಳು, ವಂದನಾರಹಿತ ಕೆಲಸ  ಎಲ್ಲದಕ್ಕೂ ಇತಿಶ್ರೀ ಹಾಡಬೇಕೆಂದುಕೊಂಡು ಅಮ್ಮನ ಜೊತೆ ನನ್ನ ಜೀವನದ ಅತಿದೊಡ್ಡ ಜಗಳ ಕಾದೆ. ಅಪ್ಪನನ್ನು ಕರೆದು, ಕೂಡಲೇ ನಮ್ಮಿಬ್ಬರನ್ನೂ ಆ ಮನೆಯಿಂದ ಕರೆದುಕೊಂಡು ಹೋಗಬೇಕೆಂದು ಕೇಳಿದೆ. ಅಪ್ಪ ಧುತ್ತೆಂದು ಬಂದು ನಮ್ಮಿಬ್ಬರನ್ನೂ ಕರೆದುಕೊಂಡು ಹೋದರು. ಅಂತೂ ನನಗೆ ಕೊನೆಗಾದರೂ ಸ್ವಾತಂತ್ರ್ಯ ಸಿಕ್ಕಿತು!

ಅಪ್ಪನ ಮನೆಗೆ ಹೋದ ಮೇಲೆ ನನ್ನ ಜೀವನದಲ್ಲಿ ಸಂಪೂರ್ಣ ಬದಲಾವಣೆಯಾಯಿತು. ಅಪ್ಪನ ಎರಡನೆಯ ಹೆಂಡತಿ ಮಾಲಾ ನನ್ನನ್ನು ಮತ್ತು ರೇಷ್ಮಳನ್ನು ಅವರ ಸ್ವಂತ ಮಕ್ಕಳೆಂದೇ ಪರಿಗಣಿಸುತ್ತಿದ್ದರು. ಆಕೆ ಎಷ್ಟೊಂದು ವಾತ್ಸಲ್ಯಮಯಿಯೆಂದರೆ, ನಾನು ಅವರನ್ನು ಅಮ್ಮನೆಂದೇ ಕರೆಯಲು ಶುರು ಮಾಡಿದೆ! (ನನಗೆ ಜನ್ಮಕೊಟ್ಟ ಅಮ್ಮನನ್ನು ಇನ್ನೆಂದೂ ನೋಡಲಿಲ್ಲ.) ಅಭ್ಯಾಸದಲ್ಲಿ ಏಕಾಗ್ರತೆ ದೊರೆತು, ಹೈಸ್ಕೂಲಿನ ಕೊನೆಯ ವರ್ಷ ಎಲ್ಲ ವಿಷಯಗಳಲ್ಲೂ ಎ ಗ್ರೇಡನ್ನು ಪಡೆದೆ.  ಆದರೆ, ನನ್ನ ತಂಗಿ ಮಾತ್ರ ಅವಳ ವಿಷಣ್ಣತೆಯಿಂದ ಹೊರ ಬರಲೇ ಇಲ್ಲ! ಪ್ರತಿ ವರ್ಷದಲ್ಲೂ ಉತ್ತೀರ್ಣಳಾಗುವುದೂ ಅವಳಿಗೆ ಕಷ್ಟವಾಗಹತ್ತಿತು. ಒಂದೇ ಸನ್ನಿವೇಶದಲ್ಲಿ ಬೆಳೆದ ಇಬ್ಬರು ಮಕ್ಕಳು, ಹೇಗೆ ವಿಭಿನ್ನವಾಗಿ ಪ್ರತಿಕ್ರಿಯಿಸುತ್ತಾರೆ ಎಂಬುದಕ್ಕೆ ನಮ್ಮ ಜೀವನವೇ ಸಾಕ್ಷಿ.

ನನ್ನ ಹೆತ್ತಮ್ಮ ಜೀವನದಲ್ಲಿ ಹೇಗೆ ಒಂಟಿಯಾಗಿಬಿಟ್ಟಳೋ, ಅದೇ ನನಗೆ ಜೀವನದಲ್ಲಿ ದೊಡ್ಡ ಪಾಠ ಕಲಿಸಿತು: ನಾನು ಸ್ನೇಹಕ್ಕೆ ತುಂಬ ಮಹತ್ವವನ್ನು ಕೊಡುತ್ತೇನೆ! ನಾನು ನನ್ನ ಗೆಳೆಯರಿಗೆ ಮತ್ತು ಗೆಳತಿಯರಿಗೆ ಸೇವೆಯನ್ನು ಮಾಡಲು ಸದಾ ಸಿದ್ಧ. ಜೀವನದ ಬಗೆಗಿನ ಈ ಬಗೆಯ ಧನಾತ್ಮಕ ದೃಷ್ಟಿಕೋನ ನನಗೆ ವರವಾಗಿ ಪರಿಣಮಿಸಿದೆ. ಒಳ್ಳೆಯ ಕಾಲೇಜಿನಲ್ಲಿ ನನಗೆ ಸೀಟು ಸಿಕ್ಕಿದೆ. ಇಲ್ಲಿಯೂ ಚೆನ್ನಾಗಿ ಓದುತ್ತಿದ್ದೇನೆ. ನನ್ನ ಪೂರ್ವಾಶ್ರಮದ ಜೀವನದ ಬಗ್ಗೆ ನನಗೆ ಕಹಿ ಇಲ್ಲ. ಅಮ್ಮನನ್ನು ಕ್ಷಮಿಸಿ ಮುಂದೆ ಸಾಗುತ್ತಿದ್ದೇನೆ. ಓ, ಗಂಟೆ ಆಗಲೇ ರಾತ್ರಿ ಹತ್ತಾಯಿತು. ನಾನು ನನ್ನ ಜೀವನದ ಕಥೆಯನ್ನಿಷ್ಟು ದೀರ್ಘವಾಗಿ ಯಾರೊಂದಿಗೂ ಹೇಳಿಕೊಂಡಿಲ್ಲ; ಸುಮಾರು ಮೂರು ಗಂಟೆ ನಿನ್ನೊಂದಿಗೆ ಹೇಳಿಕೊಂಡಿದ್ದೇನೆ. ನಿನಗೆ ನನ್ನ ಪ್ರಾಮಾಣಿಕ ಧನ್ಯವಾದಗಳು ' ಎಂದು ರಾಹುಲ್ ಹೇಳಿ ಮುಗಿಸುವ ಹೊತ್ತಿಗೆ ಅವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿದ್ದವು.

